Spl.C. 3/2020.

**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ, ಇವರ ನ್ಯಾಯಾಲಯದಲ್ಲಿ.**

**ವಿಶೇಷ ಸತ್ರ ಮೊಕದ್ದಮೆ ಸಂಖ್ಯೆ 3/2020.**

| | | | |
|---|---|---|---|
| ಹೆಸರು | : | ದುರ್ಗಪ್ಪ ತಳಗೇರಿ | ಫ್ರಾಸಾ-13 |
| ತಂದೆಯ ಹೆಸರು | : | ಸಿದ್ದಪ್ಪ | ಚಾಸಾ-24 |
| ವಯಸ್ಸು | : | 30 ವರ್ಷ | |
| ಉದ್ಯೋಗ | : | ಒಕ್ಕಲುತನ | |
| ವಾಸಸ್ಥಳ | : | ಶಿರೋಳ, ತಾಃ ಮುಧೋಳ | |

ದಿನಾಂಕಃ 28-05-2024 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.**

ಆರೋಪಿತರು ಪರಿಚಯ. ದಿನಾಂಕಃ 22-10-2019 ರಂದು ಸಿ.ಪಿ.ಐ ಆಫೀಸಿನಲ್ಲಿ ಹೇಳಿಕೆ ನೀಡಿದ್ದೇನೆ. ದಿನಾಂಕಃ 15-10-2019 ರಂದು ಮುಧೋಳ ಪೋಲಿಸಠಾಣೆಗೆ ಜೀವ ಭಯ ಇದೆ ಅಂತಾ ಹೇಳಲು ಮುಂಜಾನೆ 10.30 ಗಂಟೆಗೆ ಹೋಗಿದ್ದೆವು. ನನ್ನ ಜೊತೆ ಚಾಸಾ-1,22,25 ಹಾಗೂ ಮಹೇಶ ತಳಗೇರಿ ಇದ್ದರು. ಮಧ್ಯಾಹ್ನ 3.50 ಗಂಟೆಗೆ ನಾವು ಠಾಣೆಯಲ್ಲಿದ್ದಾಗ ಚಾಸಾ-29 ಪೋನ್ ಮಾಡಿ ವಿಠ್ಠಲ ಮತ್ತು ಮಲ್ಲಪ್ಪ ಇವರಿಗೆ ಕೊಲೆ ಮಾಡಿದ್ದಾರೆ ಅಂತಾ ಯಲ್ಲಪ್ಪ ತಳಗೇರಿ ಇವರಿಗೆ ಹೇಳಿದ. ನಂತರ ನಾವು ಕೊಲೆ ಮಾಡಿದ ಸ್ಥಳಕ್ಕೆ ಬಂದೆವು. ಆಶ್ರಯ ಪ್ಲಾಟ್ ರೋಡಿಗೆ ಮಲ್ಲಪ್ಪ ತಳಗೇರಿ ಇವರ ಶವ ಅಂಗಾತ ಬಿದ್ದಿತ್ತು. ಎಡ ಕುತ್ತಿಗೆ ಕಟ್ ಆಗಿತ್ತು.

ವಿಠ್ಠಲ ತಳಗೇರಿ ಇವರ ಶವ ಗಣಿ ರವರ ತೋಟದ ಪಕ್ಕದ ತಗ್ಗಿನಲ್ಲಿತ್ತು. ಅವನ ತಲೆ ಭಾಗ ಕಟ್ ಆಗಿತ್ತು, ಬಲಭುಜ, ಬಲಕುತ್ತಿಗೆ, ಕಣ್ಣು, ಬಲಗೈ ಕಟ್ ಆಗಿದ್ದವು. ನಿಪಿ-6 ರಿಂದ 8 ಫೋಟೋಗಳನ್ನು ನೋಡಿ ಗುರುತಿಸಿದ್ದೇನೆ.

ಸ್ಥಳದಲ್ಲಿ ಒಂದು ಸೈಕಲ್ ಮೋಟರ್, ಒಂದು ಕಾರ್ ಗಾಡಿ ನಂಬರು ಪ್ಲೇಟ್, ಮೃತರ 4 ಚಪ್ಪಲ್ ಗಳು ಇದ್ದವು, ಆರೋಪಿ-ಮಲ್ಲಪ್ಪ ಇವರ ಒಂದು ಚಪ್ಪಲಿ ಇತ್ತು, ವಿಠ್ಠಲ ತಳಗೇರಿ ಇವರ ಮೊಬೈಲ್ ಸ್ಥಳದಲ್ಲಿದ್ದವು. ವಿಠ್ಠಲ ಹಾಗೂ ಮಲ್ಲಪ್ಪ ಇವರು ಬಿಳಿ ನೆಹರೂ ಶರ್ಟು ಹಾಗೂ ಧೋತರ ಹಾಕಿಕೊಂಡಿದ್ದರು.

ಅವುಗಳಿಗೆ ರಕ್ತದ ಕಲೆಗಳಾಗಿದ್ದವು. ಮುಮಾ-1,2,15,17 ನೋಡಿ ಗುರುತಿಸಿದ್ದೇನೆ. ನಾವು ಸ್ಥಳಕ್ಕೆ ಹೋದಾಗ ರೇಣುಕಾ ತಳಗೇರಿ ಹಾಗೂ ಕಾಂಚನಾ ಇವರು 10-11-12-13 ಜನ ಕೊಲೆ ಮಾಡಿ ಕಾರ ಮತ್ತು 2 ಬೈಕನಲ್ಲಿ ಹೋದರು ಎಂದು ಹೇಳಿದರು.

ಮೇ-2019 ರಲ್ಲಿ ಆರೋಪಿತರು ನಮ್ಮ 3 ಮನೆಗಳ ಮೇಲೆ ದಾಳಿ ಮಾಡಿದ್ದರು. ಆಗ ನಾವು ಕೇಸು ಹಾಕಿದ್ದೆವು. ಆ ಸಿಟ್ಟಿನಲ್ಲಿ ಜಾಮೀನು ಮೇಲೆ ಬಂದು ಕೇಸು ವಾಪಸ್ಸು ತೆಗೆದುಕೊಳ್ಳದಿದ್ದರೆ ಕೊಲೆ ಮಾಡುತ್ತೇವೆ ಎಂದು ಬೆದರಿಸಿ ಕೊಲೆ ಮಾಡಿದ್ದಾರೆ.

13 ಜನರ ಹೆಸರು 1. ಮಲ್ಲಪ್ಪ ಹುದ್ದಾರ, 2. ಶಂಕ್ರಪ್ಪ ಗುಡದಿನ್ನಿ, 3. ರಾಜು ಮುಚ್ಚಂಡಿ, 4. ಗಿರಿಮಲ್ಲಯ್ಯ ಗಣಾಚಾರಿ, 5. ಲಕ್ಷ್ಮಣ ಜಟ್ಟೆನ್ನವರ, 6. ಅರುಣ ನಾಗರೆಡ್ಡಿ, 7. ವಿಠ್ಠಲ ಕಣಗಲ್, 8. ಕಿರಣ ನಾಗರೆಡ್ಡಿ, 9. ಮುತ್ತಪ್ಪ ಹೊಸುರ ಹಾಗೂ ಉಳಿದವರ ಹೆಸರು ಗೊತ್ತಿಲ್ಲ.

<u>**ಪಾಟೀಸವಾಲುಃ ಆರೋಪಿತರ ಪರ ಶ್ರೀ. ಎಸ್.ಸಿ.ಹೆಬ್ ವಕೀಲರಿಂದ.**</u>

ನನ್ನ ಹೇಳಿಕೆಯಲ್ಲಿ ಪೋಲಿಸರ ಮುಂದೆ ಹೇಳಿಕೆ ನೀಡುವಾಗ ಕಾಂಚನಾ ಮತ್ತು ರೇಣುಕಾ ಇವರು ಆರೋಪಿತರು ಕೊಲೆ ಮಾಡಿದ್ದಾರೆ ಅಂತಾ ಹೇಳಿದರು ಎಂದು ಹೇಳಿಲ್ಲ ಎನ್ನುವುದು ನಿಜ ಹಾಗೂ ಆರೋಪಿತರು ಕಾರು ಮತ್ತು 2 ಬೆಕನಲ್ಲಿ ಹೋದರು ಎಂಬ ವಿಷಯ ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎನ್ನುವುದು ನಿಜ.

ಮೇ-2019 ರಲ್ಲಿ ಆರೋಪಿತರು ನಮ್ಮ 3 ಮನೆಗಳ ಮೇಲೆ ದಾಳಿ ಮಾಡಿದ್ದರು, ಆಗ ನಾವು ಕೇಸು ಹಾಕಿದ್ದೆವು, ಆ ಸಿಟ್ಟಿನಲ್ಲಿ ಜಾಮೀನು ಮೇಲೆ ಬಂದು ಕೇಸು ವಾಪಸ್ಸು ತೆಗೆದುಕೊಳ್ಳದಿದ್ದರೆ ಕೊಲೆ ಮಾಡುತ್ತೇವೆ ಎಂದು ಬೆದರಿಸಿ ಕೊಲೆ ಮಾಡಿದ್ದಾರೆ ಎಂಬ ವಿಷಯವನ್ನು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎನ್ನುವುದು ನಿಜ. ನಾನು ಸ್ಥಳಕ್ಕೆ ಹೋದಾಗ ಸ್ಥಳದಲ್ಲಿ ಸ್ಥಳದಲ್ಲಿ ಒಂದು ಸೈಕಲ್ ಮೋಟರ್, ಒಂದು ಕಾರ್ ಗಾಡಿ ನಂಬರು ಪ್ಲೇಟ್, ಮೃತರ 4 ಚಪ್ಪಲ್ ಗಳು ಇದ್ದವು, ಆರೋಪಿ-ಮಲ್ಲಪ್ಪ ಇವರ

ಒಂದು ಚಪ್ಪಲಿ ಇತ್ತು, ವಿಠ್ಠಲ ತಳಗೇರಿ ಇವರ ಮೊಬೈಲ್ ಸ್ಥಳದಲ್ಲಿದ್ದವು ಎಂಬ ವಿಷಯವನ್ನು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎನ್ನುವುದು ನಿಜ.

ಕಾಂಚನಾ ಮತ್ತು ರೇಣುಕಾ ನಾವು ಸ್ಥಳಕ್ಕೆ ಹೋದಾಗ ಸ್ಥಳದಲ್ಲಿಯೇ ಹೇಳಿದ್ದಾರೆ. ಕೊಲೆ ನಡೆದಾಗ ನೋಡಿದವರು ಇದ್ದು ಅವರು ಯಾರು ಅನ್ನುವುದು ನಮಗೆ ಇದೂವರೆಗೆ ಗೊತ್ತಾಗಿರುವುದಿಲ್ಲ ಅವರು ಅಂಜಿ ಸಮ್ಮನಾಗಿದ್ದಾರೆ ಮತ್ತು ಯಾರ ಮುಂದೆ ಹೇಳಾಕ ಬರತಾ ಇಲ್ಲಾ ಅಂತಾ ತಿಳಿದಿರುತ್ತದೆ ಎಂಬ ವಿಷಯವನ್ನು ನನ್ನ ಹೇಳಿಕೆಯಲ್ಲಿ ಪೋಲಿಸರ ಮುಂದೆ ಹೇಳಿರುತ್ತೇನೆ ಎನ್ನುವುದು ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಡಿ-3 ಅಂತಾ ಗುರುತಿಸಲಾಯಿತು. ನನ್ನ ಹೇಳಿಕೆಯಲ್ಲಿ 13 ಜನ ಆರೋಪಿತರ ಹೆಸರು ಹೇಳಿಲ್ಲ ಹಾಗೂ ಮುಖ್ಯವಿಚಾರಣೆಯಲ್ಲಿ ಹೇಳಿದ 9 ಜನರ ಹೆಸರನ್ನು ಹೇಳಿ ಬರೆಯಿಸಿಲ್ಲ.

ಆರೋಪಿತರ ಮೇಲೆ ದ್ವೇಷ ಇರುವುದರಿಂದ ಮಲ್ಲಪ್ಪ ಹುದ್ದಾರ ಹಾಗೂ ಇತರ 13 ಜನರು ಕೊಲೆ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ವಿಠ್ಠಲ ಹಾಗೂ ಮಲ್ಲಪ್ಪ ಮೋಟರ ಸೈಕಲ್ ಅಪಘಾತದಲ್ಲಿ ಮರಣ ಹೊಂದಿದ್ದಾರೆ ಎನ್ನುವುದು ಸರಿಯಲ್ಲ. ರೇಣುಕಾ ಹಾಗೂ ಕಾಂಚನಾ ಸ್ಥಳದಲ್ಲಿದ್ದು ಘಟನೆ ಬಗ್ಗೆ ತಿಳಿಸಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಮೃತ ವಿಠ್ಠಲ ನನ್ನ ಚಿಕ್ಕಪ್ಪ ಹಾಗೂ ಮಲ್ಲಪ್ಪ ನನ್ನ ಅಜ್ಜ ಇರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

28-05-2024.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಾಗಲಕೋಟೆ.

**Spl.C. 3/2020.**

**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ, ಇವರ ನ್ಯಾಯಾಲಯದಲ್ಲಿ.**

**ವಿಶೇಷ ಸತ್ರ ಮೊಕದ್ದಮೆ ಸಂಖ್ಯೆ 3/2020.**

| | | | |
|---|---|---|---|
| ಹೆಸರು | : | ದಸ್ತಗೀರಸಾಬ ನದಾಫ್ | ಫ್ರಾಸಾ-12 |
| ತಂದೆಯ ಹೆಸರು | : | ಸೈದುಸಾಬ | ಚಾಸಾ-29 |
| ವಯಸ್ಸು | : | 48 ವರ್ಷ | |
| ಉದ್ಯೋಗ | : | ಕೂಲಿ ಕೆಲಸ | |
| ವಾಸಸ್ಥಳ | : | ಶಿರೋಳ | |

ದಿನಾಂಕಃ 28-05-2024 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.**

ನ್ಯಾಯಾಲಯದ ಮುಂದಿರುವ ಆರೋಪಿತರು ಪರಿಚಯವಿಲ್ಲ. ಆದರೆ ಅವರು ಶಿರೋಳ ಗ್ರಾಮದವರು. ಚಾಸಾ-1 ಪರಿಚಯವಿಲ್ಲ. ಅವರು ಶಿರೋಳದವರು.

ಈಗ 3-4 ವರ್ಷಗಳ ಹಿಂದೆ ನಾನು ಲೈನ್‌ಮನ್ ಜೊತೆ ಕುರಿದೊಡ್ಡಿ ಲೈನ್ ಮೇಲೆ ಕೆಲಸ ಮುಗಿಸಿಕೊಂಡು ಬರುವಾಗ ಮಧ್ಯಾಹ್ನ 4.00 ಅಥವಾ 4.30 ಗಂಟೆಗೆ ಶಿರೋಳ ಊರ ಹೊರಗೆ ಜನರು ನಿಂತಿದ್ದರು. ಶಂಕರ ಮುರನಾಳ ಇವರ ತೋಟದ ಹತ್ತಿರ ಜನರು ನಿಂತಿದ್ದರು. ಅಲ್ಲಿ ವಿಠ್ಠಲ ಮತ್ತು ಮಲ್ಲೆಪ್ಪ ಬಿದ್ದಿದ್ದರು. ಕುರಿದೊಡ್ಡಿ ಹಾದಿಗೆ ವಿಠ್ಠಲ ಬಿದ್ದಿದ್ದ, ಆಶ್ರಯ ಕಾಲೋನಿ ರಸ್ತೆಗೆ ಮಲ್ಲೆಪ್ಪ ಬಿದ್ದಿದ್ದ. ವಿಠ್ಠಲನ ಕುತ್ತಿಗೆಗೆ ಗಾಯವಾಗಿತ್ತು ಅದು ಯಾವ ಕಡೆಗೆ ಅಂತಾ ಗೊತ್ತಿಲ್ಲ. ಮಲ್ಲೆಪ್ಪನ ಕುತ್ತಿಗೆಗೆ ಗಾಯವಾಗಿತ್ತು ಅದು ಯಾವ ಕಡೆಗೆ ಅಂತಾ ಗೊತ್ತಿಲ್ಲ. ಮಲ್ಲಿಕಾರ್ಜುನ ಇವರ ಕಡೆಗೆ ಯಲ್ಲಪ್ಪನ ನಂಬರು ಇತ್ತು ಮಲ್ಲಿಕಾರ್ಜುನ ಇವರು ಯಲಪ್ಪನಿಗೆ ಪೋನ ಹಚ್ಚಿ ನನಗೆ ಮಾತನಾಡಲು ಕೊಟ್ಟರು. ನಾನು ವಿಠ್ಠಲ ಮತ್ತು ಮಲ್ಲೆಪ್ಪ ಸತ್ತ ಸುದ್ದಿ ಹೇಳಿ ಹೋದೆವು. ನಂತರ ಪೋಲಿಸರು ನನ್ನನ್ನು ಠಾಣೆಗೆ 15-20 ದಿನದ ನಂತರ ಕರೆಯಿಸಿದ್ದರು. ಈಗ ಸಾಕ್ಷಿಯಲ್ಲಿ ಹೇಳಿದ ವಿಷಯವನ್ನು ಅವರ ಮುಂದೆ ಹೇಳಿಕೆ ನೀಡಿದ್ದೇನೆ.

**ಪಾಟೀಸವಾಲುಃ ಆರೋಪಿತರ ಪರ ಶ್ರೀ. ಎಸ್.ಸಿ.ಹೆಚ್ ವಕೀಲರಿಂದ.**

ನಾನು ಪೋಲಿಸರ ಮುಂದೆ ನನ್ನ ಹೇಳಿಕೆಯಲ್ಲಿ ನಮ್ಮ ಲೈನ್ ಮನ್ ಮಲ್ಲಿಕಾರ್ಜುನ ಪರಪ್ಪ ಪಾತ್ರೋಟಿ ಇವರ ಮೊಬೈಲನಿಂದ ಯಲ್ಲಪ್ಪ ತಳಗೇರಿ ಇವರ ಮೊಬೈಲಗೆ ಪೋನ ಮಾಡಿ ವಿಠ್ಠಲ ಮತ್ತು ಮಲ್ಲಪ್ಪನಿಗೆ ಅಪಘಾತವಾಗಿದೆ ಬಾ ಅಂತಾ ತಿಳಿಸಿರುತ್ತೇನೆ ಅಂತಾ ಪೋಲಿಸರ ಮುಂದೆ ದಿನಾಂಕಃ 25-10-2019 ರಂದು ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಸದರಿ ಭಾಗವನ್ನು ನಿಡಿ-2 ಅಂತಾ ಗುರುತಿಸಲಾಯಿತು.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ. ಸರಿ ಅದೆ.

28-05-2024.
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಾಗಲಕೋಟೆ.